

ಪ್ರಾಚೀನ ಮಣ್ಣಿನಪಾತ್ರೆ



ದುಶಾಂಬೆಯ ಜನಾಂಗೀಯ ವಸ್ತುಸಂಗ್ರಹಾಲಯ

ಸಾಮಾನ್ಯವಾಗಿ ಮಧ್ಯ ಏಷಿಯಾದ, ಅದರಲ್ಲೂ ವಿಶೇಷವಾಗಿ ತಜಕಿಸ್ತಾನದ ಚರಿತ್ರೆಯ ಪುಟಗಳನ್ನು ತಿರುವಿದರೆ ಕಂಡುಬರುವುದೆಂದರೆ ಕುಶಾನರ, ಮೊಘಲ್ ದೊರೆಗಳ ಕಾಲದಲ್ಲಿ ಈ ಭಾಗಕ್ಕೂ ಭಾರತದ ಪ್ರದೇಶಕ್ಕೂ ಕೊಡುಕೊಳುವಿಕೆಯ ಸಂಬಂಧವಿತ್ತು. ಇಸ್ಲಾಂ ಆಕ್ರಮಣಕ್ಕೂ ಮುಂಚೆ ಈ ಪ್ರದೇಶವು ಜೊರಾಸ್ಟ್ರಿಯನ್ನರ ಹಾಗೂ ಬೌದ್ಧಧರ್ಮೀಯರ ವಸತಿ ಪ್ರದೇಶವಾಗಿತ್ತು. ಇಲ್ಲಿನ ಅಜಿನಾಟಪ್ಪೆಯಲ್ಲಿ ಉತ್ಖನನದ ವೇಳೆ ಕಂಡುಬಂದ ಸತ್ಯವೆಂದರೆ ಇಲ್ಲಿ ಬೌದ್ಧರ ವಿಶಾಲ ಮಠ ಅಥವಾ ಮೊನಾಸ್ಟ್ರಿ ಒಂದು ಸಾವಿರ ವರ್ಷಗಳಿಗೂ ಹೆಚ್ಚುಕಾಲ ಕಾರ್ಯ ನಿರ್ವಹಿಸಿತು. ಭಾರತವನ್ನೂ ಸೇರಿಸಿ ಮಧ್ಯ ಏಷಿಯಾದವರೆಗೂ ವಿಸ್ತರಿಸಿದ್ದ ಕುಶಾನರ ಆಳ್ವಿಕೆಯಲ್ಲಿ ಬೌದ್ಧಧರ್ಮ ಹುಲುಸಾಗಿ ಬೆಳೆಯಿತು. ಕುಶಾನರ ಸಾಮ್ರಾಟ ಕನಿಷ್ಕ ಸ್ವತಃ ಬೌದ್ಧನಾಗಿದ್ದ. ಬೌದ್ಧ ವಿಹಾರಗಳನ್ನು ಸ್ಥಾಪಿಸಿದ. ಜನರಿಗೆ ಮಾನವೀಯತೆಯನ್ನು ಬೋಧಿಸಿದ.

ಇದೆಲ್ಲ ಚರಿತ್ರೆಗೆ ಸೇರಿದ್ದು. ಇಸ್ಲಾಂ ಆಕ್ರಮಣಗಳು ಆರಂಭಗೊಂಡಾಗ 5–6ನೇ ಶತಮಾನದಲ್ಲಿ ಜನರನ್ನು ಬಲವಂತವಾಗಿ ಇಸ್ಲಾಂಧರ್ಮಕ್ಕೆ ಮತಾಂತರ ಮಾಡಲಾಯ್ತು. ಅನ್ಯ ಧರ್ಮೀಯರ ಪೂಜಾಸ್ಥಳಗಳನ್ನು ನಾಶಗೊಳಿಸಲಾಯಿತು. ಮೊಘಲರ ಕಾಲದಲ್ಲಿ ಇಡೀ ಮಧ್ಯ ಏಷಿಯಾ ಇಸ್ಲಾಮೀಕರಣಗೊಂಡಿತು. ಬೌದ್ಧ ಸ್ತೂಪಗಳು ಧರೆಗುರುಳಿದವು. ದೇವತೆಗಳ ಶಿರಚ್ಛೇದನಗಳಾದವು. ಇಂತಹ ಭೀಕರ ಉದಾಹರಣೆ ಜನಾಂಗೀಯ ವಸ್ತು ಸಂಗ್ರಹಾಲಯದಲ್ಲಿ ಇದೆ. ಬೃಹತ್ ಗಾತ್ರದ ಶಿವ–ಪಾರ್ವತಿಯರ ಮೂರ್ತಿಯನ್ನು ರುಂಡಚ್ಛೇದನ ಮಾಡಲಾಗಿದೆ. ರುಂಡವಿಲ್ಲದ ಬೃಹತ್ ಗಾತ್ರದ ಆ ಮೂರ್ತಿ ತಜಕಿಸ್ತಾನದ ಮ್ಯೂಸಿಯಂನಲ್ಲಿ ಸ್ಥಾಪನೆಗೊಂಡಿದ್ದು ಹಿಂದೂಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಈ ಮೂರ್ತಿ 6–8ನೇ ಶತಮಾನದ್ದೆಂದು ಹೇಳಲಾಗಿದ್ದು ತಜಕಿಸ್ತಾನದ ವಾಯವ್ಯ ಭಾಗದಲ್ಲಿರುವ ಪಂಜಿಕೆಂಟ್ ಪ್ರದೇಶದಲ್ಲಿ ಪತ್ತೆಯಾಗಿದೆ.

ತಜಕಿಸ್ತಾನದ ಜನಾಂಗೀಯ ವಸ್ತು ಸಂಗ್ರಹಾಲಯದ ಇನ್ನೊಂದು ಪ್ರಮುಖ ಆಕರ್ಷಣೆ ಮಲಗಿರುವ ಬುದ್ಧ ಅಥವಾ ನಿರ್ವಾಣ ಬುದ್ಧ. 1600 ವರ್ಷಗಳ ಹಿಂದೆ ಜೇಡಿಮಣ್ಣಿನಲ್ಲಿ ಮಾಡಲಾದ ಬೃಹತ್ ಗಾತ್ರದ ಈ ಬುದ್ಧ ಮೂರ್ತಿ ಜಗತ್ತಿನಲ್ಲಿರುವ ಅತಿದೊಡ್ಡ ಮಣ್ಣಿನ ಬುದ್ಧ ಮೂರ್ತಿ. 12.87 ಮೀಟರ್ ಉದ್ದ ಹಾಗೂ ಐದು ಟನ್ ಭಾರವಿರುವ ಮೂರ್ತಿ ನೈರುತ್ಯ ತಜಕಿಸ್ತಾನದ ಅಜಿನಾಟಪ್ಪೆಯಲ್ಲಿ ಉತ್ಖನನದ ವೇಳೆ ದೊರೆತಿದೆ. ಈ ಬೃಹತ್ ಮೂರ್ತಿಯ ಎದೆಯ ಮೇಲಿನ ಭಾಗ ಜೀರ್ಣಗೊಂಡಿತ್ತು. ಪ್ರಾಚ್ಯ ವಸ್ತು ತಜ್ಞರು ಅದನ್ನು ಮರುನಿರ್ಮಾಣ ಮಾಡಿದ್ದಾರೆ.

ಅಜಿನಾಟಪ್ಪೆಯಲ್ಲಿ ಈ ವಿಗ್ರಹ ಪತ್ತೆಯಾಗಿದ್ದು ಸುಮಾರು 40 ವರ್ಷಗಳ ಹಿಂದೆಯಾದರೂ 2000ದವರೆಗೆ ಅದಕ್ಕೆ ಮುಕ್ತಿ ದೊರೆತಿರಲಿಲ್ಲ. ತಜಕಿಸ್ತಾನವು ಸ್ವತಂತ್ರ ರಾಷ್ಟ್ರವಾಗಿ ತನ್ನದೇ ಸಂಸ್ಕೃತಿಯ ಹಿರಿಮೆ ಗರಿಮೆಗಳನ್ನು ಸಾಧಿಸಲು ತೊಡಗಿದಾಗ ದುಶಾಂಬೆಯ ಅಕಾಡೆಮಿ ಆಫ್ ಸೈನ್ಸ್‌ನಲ್ಲಿ, 42 ವಿಭಾಗಗಳಲ್ಲಿ ಹಂಚಿಹೋಗಿದ್ದ ಈ ಮೂರ್ತಿಗೆ ಮರುಜೋಡಣೆಯ ಮುಹೂರ್ತ ಬಂತು. ಈ ಕ್ಷೇತ್ರದಲ್ಲಿ ಹೆಸರು ಮಾಡಿದ್ದ ವಿ ಫೊವಿನಿಕ್ ಅವರ ಮಾರ್ಗದರ್ಶನದಲ್ಲಿ 2000 ಇಸವಿಯಲ್ಲಿ ಆರಂಭಗೊಂಡ ಮರುಜೋಡಣೆ ಕಾರ್ಯ 2001ರಲ್ಲಿ ತಜಕಿಸ್ತಾನದ ಸ್ವಾತಂತ್ರ್ಯದ ದಶಮಾನೋತ್ಸವದ ವೇಳೆಗೆ ಪೂರ್ಣಗೊಂಡು ಉದ್ಘಾಟನೆಗೊಂಡಿತು. ಈಗ ತಜಕಿಸ್ತಾನಕ್ಕೆ ಯಾರೇ ವಿಐಪಿಗಳು ಬರಲಿ, ನಿರ್ವಾಣ ಬುದ್ಧನ ದರ್ಶನ ಅಧಿಕೃತಕಾರ್ಯದಲ್ಲಿ ಸೇರುವಷ್ಟು ಈ ಮಲಗಿರುವ ಬುದ್ಧ ಪ್ರಮುಖನೆನಿಸಿದ್ದಾನೆ.

ಕೆನ್ನೆಗೆ ಕೈಕೊಟ್ಟು ಬಲ ಪಾರ್ಶ್ವದಲ್ಲಿ ಮಲಗಿರುವ ಸ್ಥಿತಿಯಲ್ಲಿರುವ ಬುದ್ಧನ ವಿಗ್ರಹ ಬಲು ಅಪರೂಪದ್ದು. ಬಲಗೈ ಕೆನ್ನೆಯ ಕೆಳಗಿದ್ದರೆ ದಿಂಬುಗಳ ಮೇಲಿದೆ. ಗುಂಗುರು ಕೂದಲು, ಪ್ರಶಾಂತ ಮುಖ ಮುದ್ರೆ, ನಸುನಗುವ ತುಟಿ, ವಿಶಾಲ ಎದೆ, ನೀಳ ಕಾಲುಗಳು, ಈ ಬುದ್ಧ ವಿಗ್ರಹಕ್ಕೆ ಮೊದಲ ನೋಟದಲ್ಲಿ ಮನಸೋಲದವರಿಲ್ಲ. ಬುದ್ಧನ ವಸ್ತ್ರದ ಮೇಲಿನ ನೆರಿಗೆ, ಕಾಲುಬೆರಳುಗಳ ಗಾತ್ರ, ಅಚ್ಚರಿ ಎನಿಸುತ್ತದೆ. ದೇಹದ ಪ್ರತಿಯೊಂದು ವಿವರಗಳೂ ಸ್ಪಷ್ಟವಾಗಿವೆ. ವಾಸ್ತವವಾಗಿ ಇದು ನೆಲದಾಳದಲ್ಲಿ ಸಿಕ್ಕಿದಾಗ ಮೂರ್ತಿಯ ಮುಖ ಹಾಗೂ ಹೊಟ್ಟೆಯ ಭಾಗ ಮಣ್ಣಾಗಿತ್ತು. ಅದನ್ನು ಮರುನಿರ್ಮಿಸಿರುವುದರಿಂದ ಬಣ್ಣದಲ್ಲಿ ವ್ಯತ್ಯಾಸಕಾಣುತ್ತದೆ. ಅದೇನೇ ಇರಲಿ, ಕಾಲದ ಗರ್ಭಕ್ಕೆ ಸೇರಿಹೋಗಿದ್ದ ಮಧ್ಯ ಏಷಿಯಾದ ಚರಿತ್ರೆಯ ಮಹತ್ವದ ಸಾಕ್ಷಿಯೊಂದು ಉತ್ಖನನಗೊಂಡ ನಲವತ್ತು ವರ್ಷಗಳ ಮೇಲಾದರೂ ಮರುಜೀವ ಪಡೆದು ದುಶಾಂಬೆಯ ಹೆಮ್ಮೆಗಳಲ್ಲಿ ಒಂದಾಗಿ ಉಳಿಯುವಂತಾದುದು ಸಮಾಧಾನದ ವಿಷಯ. ಭಾರತದಲ್ಲಿ ಹುಟ್ಟಿದ ಸಿದ್ಧಾರ್ಥ, ಗೌತಮ ಬುದ್ಧನಾಗಿ ಬದಲಾಗಿ ಬೌದ್ಧಧರ್ಮ ಸ್ಥಾಪಕನಾಗಿ ಜಗತ್ತಿನಾದ್ಯಂತ ಪೂಜನೀಯನಾಗಿ ಕಾಲಾತೀತನಾಗಿ ನಿಂತಿರುವುದಕ್ಕೆ ಈ ಬುದ್ಧ ವಿಗ್ರಹ ಕೊಂಡಿಯಾಗಿದೆ.

ಜನಾಂಗೀಯ ವಸ್ತು ಸಂಗ್ರಹಾಲಯದಲ್ಲಿರುವ ಇನ್ನಷ್ಟು ವಸ್ತುಗಳೆಂದರೆ ಪ್ರಾಚೀನ ಗೋರಿಯಲ್ಲಿ ಸಿಕ್ಕ ಮನುಷ್ಯನ ಪಳೆಯುಳಿಕೆ ಹಾಗೂ ಇತರ ವಸ್ತುಗಳು. ಸಾವಿರಾರು ವರ್ಷಗಳ ಹಿಂದೆ ಸತ್ತ ಯುವತಿಯ ಗೋರಿಯನ್ನು ಇಲ್ಲಿಗೆ ತಂದಿಡಲಾಗಿದೆ. ಅಲ್ಲಿ ಯುವತಿಯ ತಲೆಬುರುಡೆ ಮತ್ತು ಮೂಳೆಗಳ ಹಂದರ ಮಾತ್ರವಿದೆ. ಅವಳಿಗಾಗಿ ಇರಿಸಿದ ಬಂಗಾರದ ಮಣಿಗಳು ಹಾಗೂ ಇತರ ವಸ್ತುಗಳನ್ನೂ ಯಥಾವತ್ ಸಂಗ್ರಹಿಸಲಾಗಿದೆ. ಇಡೀ ಜಗತ್ತಿನ ದಂಡಯಾತ್ರೆ ಕೈಗೊಂಡ ಅಲೆಕ್ಸಾಂಡರ್ ದಿ ಗ್ರೇಟ್ ತಜಕಿಸ್ತಾನದವರೆಗೂ ಬಂದು ಇಲ್ಲಿನ ಕೊಳವೊಂದರಲ್ಲಿ ಅವನ ಕುದುರೆ ಮುಳುಗಿದ್ದರಿಂದ ವಾಪಸ್ಸು ಹೋದನೆಂಬುದು ಒಂದು ಪ್ರತೀತಿ. ವಸ್ತು ಸಂಗ್ರಹಾಲಯದಲ್ಲಿರುವ ಅಲೆಕ್ಸಾಂಡರನ ದಂತದ ಮೂರ್ತಿ ಅಪರೂಪದ್ದಾಗಿದೆ. ಸ್ವಸ್ತಿಕ್ ಚಿಹ್ನೆಯನ್ನು ಇಲ್ಲಿನ ಜನರೂ ಬಳಸುತ್ತಿದ್ದರೆಂಬುದಕ್ಕೆ ಇಲ್ಲಿ ಸಾಕ್ಷಿ ಸಿಗುತ್ತದೆ. ಜೊರಾಸ್ಟ್ರಿಯನ್ ಕಾಲದ ನಾಣ್ಯಗಳು, ಚಿತ್ರಗಳು, ಬೌದ್ಧ ಮೊನಾಸ್ಟ್ರಿಯಲ್ಲಿದ್ದ ಗೋಡೆ ಚಿತ್ರಗಳು, ಉಬ್ಬುಚಿತ್ರಗಳು, ಪ್ರದರ್ಶನಕ್ಕಿವೆ. ಇವೆಲ್ಲ ನಮ್ಮ ಸಂಸ್ಕೃತಿಗೂ ಇಲ್ಲಿಗೂ ಬಹಳ ಅಂತರವಿರಲಿಲ್ಲ ಎಂಬುದನ್ನು ಸಾಬೀತುಪಡಿಸುತ್ತವೆ. ಆದಿಮಾನವ ಬಳಸುತ್ತಿದ್ದ ಕಲ್ಲಿನ ಆಯುಧಗಳಿಂದ ಆರಂಭಿಸಿ ಇಡೀಮಾನವ ಜನಾಂಗ ಮಧ್ಯ ಏಷಿಯಾದಲ್ಲಿ ಬೆಳೆದುಬಂದ ಹಾದಿಯ ಒಂದು ಮಿನಿ ಚಿತ್ರಣ ಇಲ್ಲಿ ಸಿಗುತ್ತದೆ.

ಮಲಗಿರುವ ಬುದ್ಧನಿಂದಾಗಿ ಈ ವಸ್ತು ಸಂಗ್ರಹಾಲಯ ತಜಕಿಸ್ತಾನಕ್ಕೆ ಬರುವ ಅತಿಥಿಗಳಿಗೆಲ್ಲ ಅಧಿಕೃತ ಭೇಟಿನೀಡುವ ಪ್ರತಿಷ್ಠಿತ ಸ್ಥಳವಾಗಿದೆ. ತಜಕಿಸ್ತಾನಕ್ಕೆ ಹೋದವರು ಈ ವಸ್ತಸಂಗ್ರಹಾಲಯ ನೋಡದಿದ್ದರೆ ಅದು ಅವರ ನಷ್ಟವಾಗುತ್ತದೆ ಹಾಗೂ ಈ ದೇಶದ ಪುರಾತನ ಕಾಲವನ್ನು ಅರ್ಥಮಾಡಿಕೊಳ್ಳುವ ಅವಕಾಶವೊಂದು ತಪ್ಪಿಹೋದಂತಾಗುತ್ತದೆ! ■